ಆರ್ಥಿಕವಾಗಿ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಇದಕ್ಕೆ ಹೆಚ್ಚಿನ ಮತ್ತು ಮೊದಲನೇ ಆದ್ಯತೆ ಕೊಟ್ಟು ಜಾಗ್ರತೆ ಇದನ್ನು ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಹೆಚ್. ಡಿ. ದೇವೇಗೌಡ.—ಈ ರಸ್ತೆಯೂ ಸಹ ರಾಜ್ಯ ಸರ್ಕಾರದ ಶಿಫಾರಸ್ ಪಟ್ಟಿಯಲ್ಲಿ ಸೇರಿದೆ. ಬೆಳಗಾಂ, ಬಿಜಾಪುರ, ಗುಲ್ಬರ್ಗಾ ಹಾಗೂ ಹುಮ್ನಾಬಾದ್ ರಸ್ತೆಯ ಬಗ್ಗೆ ಪ್ರಪೋಸಲ್ ಹೋಗಿದೆ. ಆದರೆ ತಾವು ಹೇಳಿದ ಪ್ರಕಾರ ಇದಕ್ಕೇ ಮೊದಲು, ಮೊದಲ ಆದ್ಯತೆ ಕೊಟ್ಟರೆ ಬೇರೆ ರಸ್ತೆಗಳ ಬಗ್ಗೆ ನಮ್ಮ ಸರ್ಕಾರಕ್ಕೆ ಅಷ್ಟು ಆಸಕ್ತಿ ಇಲ್ಲವೆಂಬ ಭಾವನೆ ಕೇಂದ್ರಕ್ಕೆ ಬರಬಹುದು. ಆದ್ದರಿಂದ ಈ 6 ರಸ್ತೆಗಳನ್ನೂ. ಸಹ ಒಟ್ಟಿಗೆ ತೆಗೆದುಕೊಳ್ಳಬೇಕೆಂದು ನಾವು ಒತ್ತಾಯ ಮಾಡಿದ್ದೇವೆ.

ಶ್ರೀ ಕೆ. ಮಲ್ಲಪ್ಪ.—ನಮ್ಮ ಭಾಗದಲ್ಲಿ ಬರುವಂತಹ ಸೇತುವೆಯ ದುರಸ್ತಿಯ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು ಮತ್ತು ರಸ್ತೆಗೆ ಅಡ್ಡವಾಗಿರುವ ಮರಗಳನ್ನು ಕಡಿಸುವ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳದಿದ್ದರೆ ನಾಳ್ಕನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳು ಓಡಾಡಲು ತೊಂದರೆ ಯಾಗುತ್ತದೆ. ಆದ್ದರಿಂದ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಆದೇಶ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಪಂಪಾಪತಿ.—ನಮ್ಮ ನಾಲ್ಕನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಎರಡು ರೈಲ್ವೇ ಲೆವೆಲ್ ಕ್ರಾಸಿಂಗ್ ಗಳು ಬರುವುದರಿಂದ ವಾಹನ ಸಂಚಾರಕ್ಕೆ ಮತ್ತು ಜನರ ಓಡಾಟಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಿರಿ. ಆದರೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ದಾವಣಗೆರೆ ಮತ್ತು ಹರಿಹರ ಮಾರ್ಗದಲ್ಲಿ ಬೈ-ಪಾಸ್ ರೋಡ್ ಮಾಡಬೇಕು ಎಂಬುದು ಅವರ ಉದ್ದೇಶವಾಗಿದೆ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ವಿಷಯ: ಬಳ್ಳಾರಿ ಜಿಲ್ಲೆಯಲ್ಲಿ ಐದನೆಯ ನೀರಾವರಿ ಯೋಜನೆ.

ಪ್ರ. 274 (94) ಶ್ರೀ ಕೆ. ಚೆನ್ನಬಸವನಗೌಡ,—(ಕೂಡ್ಲಗಿ) ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

ಬಳ್ಳಾರಿ ಜಿಲ್ಲಾ ಹಗರಿಬೊಮ್ಮನಹಳ್ಳಿ ತಾಲ್ಲೂಕು ತಂಬ್ರಹಳ್ಳಿ ಏತ ಯೋಜನೆಯ ಕಾಲುವೆ ಮತ್ತು ಪಕ್ಕದ [ರಸ್ತೆಗಳಿಗೋಸ್ಕರ ಬೇಕಾಗಿರುವ ಜಮೀನುಗಳನ್ನು ಸರ್ಕಾರ ವಶಪಡಿಸಿಕೊಂಡು 10 ವರ್ಷ ಗಳಾದರೂ ಸಹ ಪರಿಹಾರ ಧನ ಕೊಡದೇ ಇರುವುದಕ್ಕೆ ಕಾರಣ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಮೇಲಿನ ಯೋಜನೆಯ ಮೊದಲನೆ ಹಂತದ ಕಾಲುವೆ ಹಾಗೂ ರಸ್ತೆಗಳಿಗೋಸ್ಕರವಾಗಿ ಬೇಕಾಗಿದ್ದ 7 ಎಕರೆ 59 ಸೆಂಟು ಜಮೀನಿಗೆ ಕೊಡಬೇಕಾದ ಪರಿಹಾರ ಧನದ ಕೊನೆಯ ನಿರ್ಣಯವನ್ನು ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ದಿನಾಂಕ: 30–10–1972 ರಲ್ಲಿ ಒಟ್ಟುರೂ. 10,474–20 ಗೆ ನಿಗದಿಪಡಿಸಿ ಅದರಂತೆ 7–12–1972 ರಂದು ಭೂ ಮಾಲೀಕರಿಗೆ ಪರಿಹಾರಧನವನ್ನು ವಿತರಣೆ ಮಾಡಲಾಗಿದೆ.

ಇದೇ ಯೋಜನೆಯ ಎರಡನೆಯ ಹಂತದ ರಿಡ್ಜ್ ಕಾಲುವೆಗೋಸ್ಕರ 2.36 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಭೂಸ್ವಾಧೀನ ಕಾಯಿದೆಯ 4 (1) ರ ಪ್ರಕಾರ 14–10–1982 ರ ಗೆಜೆಟ್‌ನಲ್ಲಿ ಪ್ರಕಟಣೆ ಯಾಗಿರುತ್ತದೆ. ಅವಾರ್ಡು ಮಂಜೂರಾದ ಕೂಡಲೇ ಭೂ ಪರಿಹಹಾರದ ಹಣ ಕೊಡಲಾಗುವುದು.

ಶ್ರೀ ಕೆ. ಚೆನ್ನಬಸವನಗೌಡ.—ಈಗ ನನಗೆ ತಿಳಿದಂತೆ ಪಂಪ್-ಹೌಸ್ ಹಾಗೂ ಸ್ಟೋರೇಜ್ ಟ್ಯಾಂಕ್ ಗಳಿಗೆ ಸಂಬಂಧಪಟ್ಟಂತೆ ವಶಪಡಿಸಿಕೊಂಡಿರುವ ಜಮೀನಿಗೆ ಪರಿಹಾರ ಕೊಟ್ಟು ರಸ್ತೆಗಳಿಗೆ ಸಂಬಂಧಪಟ್ಟಂತೆ ವಶಪಡಿಸಿಕೊಂಡಿರುವ ಜಮೀನಿಗೆ ಪರಿಹಾರ ಕೊಟ್ಟಿಲ್ಲ. ಈ ಬಗ್ಗೆ ರೈತರಿಂದ ದೂರುಗಳು ಸರ್ಕಾರಕ್ಕೆ ಬಂದಿಲ್ಲವೇ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಮೊದಲನೆಯ ಹಂತದ ಕೆಲಸಕ್ಕೆ ಸಂಬಂಧಪಟ್ಟಂತೆ ಜಮೀನು ಸರ್ಕಾರದ ಸುಪರ್ದಿಗೆ ಬಂದಿದೆ. ಇದಕ್ಕೆ ಪರಿಹಾರದ ಹಣವನ್ನು ಕೊಟ್ಟಿದ್ದೇವೆ. ಇನ್ನು ಎರಡನೆಯ ಹಂತದ ಕೆಲಸಕ್ಕೆ ಬೇಕಾದ ಜಮೀನು ಇನ್ನು ಸರ್ಕಾರದ ಸುಪರ್ದಿಗೆ ಬಂದಿಲ್ಲ. ಈ ಬಗ್ಗೆ ಭೂ ಸ್ವಾಧೀನ ಕಾಯಿದೆಯ 4 (1) ರ ಪ್ರಕಾರ ನೋಟಿಫಿಕೇಷನ್ ಪ್ರಕಟಣೆಯಾಗಿದೆ. ಫೈನಲ್ ನೋಟಿಫಿಕೇಷನ್ ಆದ ನಂತರ ಜಮೀನು ನಮ್ಮ ಸುಪರ್ದಿಗೆ ಬರುತ್ತದೆ. ಆಗ ಹಣವನ್ನು ಕೊಡುತ್ತೇವೆ.

ವಿಷಯ: ಹೊಸದುರ್ಗ ತಾಲ್ಲೂಕಿನಲ್ಲಿ ಸಣ್ಣ ಕೆರೆಗಳನ್ನು ನಿರ್ಮಿಸುವುದು.

ಪ್ರ. 275 (102) ಶ್ರೀ ಜಿ. ಬಸಪ್ಪ (ಹೊಸದುರ್ಗ).— ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ರಾಜ್ಯ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಹೊಸದುರ್ಗ ತಾಲ್ಲೂಕು ಪದೇ ಪದೇ ಅಭಾವಕ್ಕೆ ಗುರಿಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;